**OS. No.45/2018**
**D.W-6**

**( ದಿನಾಂಕ.21-02-2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು)**

ಪಾಟೀ ಸವಾಲುಃ ಶ್ರೀ. B.A.D. ವಕೀಲರಿಂದ

ನನ್ನ ಜೀವಮಾನದಲ್ಲಿ ತಾಂಡಾದಲ್ಲಿ ಸುಮಾರು ನೂರಾರು ಪಂಚಾಯತಿ ಮಾಡಿರುತ್ತೇನೆ. ಸಾಮಾನ್ಯವಾಗಿ ನಾನು ಹಾಜರಿರುವ ಪಂಚಾಯತಿಲ್ಲಿ DW-3,4 ಮತ್ತು 5 ರವರು ಹಾಜರಿರುತ್ತಾರೆಂದರೆ, ಬೇರೆಯವರು ಕೂಡಾ ಹಾಜರಿರುತ್ತಾರೆಂದು ನುಡಿಯುತ್ತಾರೆ. ನಾವು ಮಾಡುವ ಪಂಚಾಯತಿಯಲ್ಲಿ ತೀರ್ಮಾನವಾದ ನಂತರ ದಾಖಲೆ ರೂಪದಲ್ಲಿ ನಾವು ಬರೆಯುವುದಿಲ್ಲ, ಹಾಗೆ ಬಾಯಿ ಮಾತಿನ ಮೂಲಕ ಮಾಡುತ್ತೇನೆ.1998 ನೇ ಸಾಲಿನಲ್ಲಿ ಎಷ್ಟು ಪಂಚಾಯತಿ ಮಾಡಿರುತ್ತೇವೆಂದರೆ ನನಗೆ ಹೇಳಲು ಬರುವುದಿಲ್ಲ. 1998 ನೇ ಸಾಲಿನಲ್ಲಿ ಯಾರ್ಯಾರ ನಡುವೆ ಪಂಚಾಯತಿ ಮಾಡಲಾಗಿದೆ ಎಂದು ಹೇಳಲಾಗುವುದಿಲ್ಲ. ನಾನು ತೀರ್ಥ ತಾಂಡಾದಲ್ಲಿ ಆಧಾರ ಗುರುತಿನ ಚೀಟಿ ಹೊಂದಿರುತ್ತೇನೆ. ಅದರ ನಂಬರ 864245949377 ಇರುತ್ತದೆ ಎಂದರೆ ಸರಿ. ನಾನು ದಿಃ07-09-1977 ಜನಿಸಿರುತ್ತೇನೆಂದು ಆಧಾರ ಚೀಟಿಯಲ್ಲಿ ಬರೆದಿದೆ ಎಂದರೆ ಸರಿ. ನಾನು 1998 ರಲ್ಲಿ ನಾನು ಸುಮಾರು 21 ವರ್ಷದ ಹುಡುಗ ಇದ್ದೇನೆ ಎಂದರೆ ಸರಿ. ಆ ವೇಳೆಗೆ ನಾನು ಪಂಚಾಯತಿ ಮಾಡುತ್ತಿರಲಿಲ್ಲ ಎಂದರೆ, ಸಾಕ್ಷಿ ಪಂಚಾಯತಿಗೆ ಜೊತೆಯಲ್ಲಿ ಹೋಗುತ್ತಿದ್ದೆ ಎಂದು ನುಡಿಯುತ್ತಾರೆ.

**OS. No.45/2018**

**D.W-6**

ನಾಮದೇವ ಪವಾರರವರಿಗೆ ಆಸ್ತಿಗಳು ಹೇಗೆ ಬಂದವು, ಎಂಬ ಬಗ್ಗೆ ನಾನು ದಾಖಲೆ ನೋಡಿಲ್ಲ. ವಾದಿ ಮತ್ತು 1 ನೇ ಪ್ರತಿವಾದಿ ನಡುವೆ ಏನು ದಾವೆ ನಡೆದಿದೆ ಎಂದು ನನಗೆ ಮಾಹಿತಿ ಇಲ್ಲ. ನನ್ನನ್ನು ಸಾಕ್ಷಿ ನುಡಿಯಲು 1 ನೇ ಪ್ರತಿವಾದಿ ಮತ್ತು ಆಕೆಯ ಗಂಡ ಕರೆದಿರುತ್ತಾರೆ. 1 ನೇ ಪ್ರತಿವಾದಿ ಕರೆದ ನಂತರ ಎಂಟು ದಿನಕ್ಕೆ ನನ್ನ ಮುಖ್ಯ ವಿಚಾರಣೆ ಸಲ್ಲಿಸಿರುತ್ತೇನೆ. ನನ್ನ ಪ್ರಮಾಣ ಪತ್ರದಲ್ಲಿ ಏನೇನು ಬರೆದಿದೆ ಎಂದರೆ ನನಗೆ ಗೊತ್ತಿಲ್ಲ.

1 ನೇ ಪ್ರತಿವಾದಿ ಈಗ 5 ನೇ ಪ್ರತಿವಾದಿ ಬಳಿ ತೀರ್ಥ ತಾಂಡಾದಲ್ಲಿ ಇರುತ್ತಾಳೆ. 1 ಮತ್ತು 6 ನೇ ಪ್ರತಿವಾದಿ ನಡುವೆ ತಂಟೆ ತಕರಾರು ಆದ ಬಗ್ಗೆ ನನಗೆ ಗೊತ್ತಿಲ್ಲ. ಅವರಿಬ್ಬರ ನಡುವೆ ಆದ ವಿವಾದದ ಬಗ್ಗೆ ನಾನು ಪಂಚಾಯತಿ ಮಾಡಿಲ್ಲ. ನಾಮದೇವ ಪವಾರರವರಿಗೆ 5 ನೇ ಪ್ರತಿವಾದಿ ಮುಂಬೈನ ಯಾವ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಿರುತ್ತಾಳೆಂದು ನನಗೆ ಸದರಿ ಆಸ್ಪತ್ರೆಯ ಹೆಸರು ನಿಖರವಾಗಿ ಗೊತ್ತಿಲ್ಲ. 5 ನೇ ಪ್ರತಿವಾದಿ ನಾಮದೇವರವರಿಗೆ 2 ಲಕ್ಷ ರೂಪಾಯಿ ಖರ್ಚು ಮಾಡಿದ ಬಗ್ಗೆ ಅವಳ ಹೇಳಿಕೆ ಮೇರೆಗೆ ನಾನು ಹೇಳಿರುತ್ತೇನೆ ಹೊರತು, ಖರ್ಚಿನ ಬಗ್ಗೆ ದಾಖಲೆ ನೋಡಿಲ್ಲ ಎಂದರೆ ಸರಿ. ನಾಮದೇವರವರು 5 ನೇ ಪ್ರತಿವಾದಿಗೆ ಜೀವನಾಂಶ ಬಾಬತ್ತ ಆಸ್ತಿಗಳನ್ನು ಕೊಟ್ಟ ಬಗ್ಗೆ ನಾನು ಹೇಳಿ ಬರೆಸಿಲ್ಲ.

**OS. No.45/2018**

**D.W-6**

1 ನೇ ಪ್ರತಿವಾದಿಗೆ ಆಸ್ತಿಗಳು ಹೇಗೆ ಬಂದವು ಎಂದು ನಾನು ದಾಖಲೆ ನೋಡಿಲ್ಲ, ಆದರೆ ಬೇರೆಯವರಿಂದ ಕೊಂಡುಕೊಂಡಿರುತ್ತಾರೆ. ಯಾರಿಂದ, ಎಷ್ಟು ಹಣಕ್ಕೆ ಮತ್ತು ಯಾವತ್ತು 1 ನೇ ಪ್ರತಿವಾದಿ ಕೊಂಡುಕೊಂಡಿದ್ದಳು ಎಂದರೆ ನನಗೆ ಗೊತ್ತಿಲ್ಲ, ಆ ಬಗ್ಗೆ ಕೂಡಾ ನಾನು ನನ್ನ ಪ್ರಮಾಣ ಪತ್ರದಲ್ಲಿ ಹೇಳಿ ಬರೆಸಿಲ್ಲ ಎಂದರೆ ಸರಿ. ನಾಮದೇವ 1 ನೇ ಪ್ರತಿವಾದಿ ಹೆಸರಿನಲ್ಲಿ ಜಮೀನು ಖರೀದಿಸಿದ್ದರು ಎಂದರೆ ಸರಿ. ಈ ದಾವೆ ಯಾವ ಯಾವ ಜಮೀನುಗಳು ಮತ್ತು ಮನೆಗಳಿಗೆ ಸಂಬಂಧಪಟ್ಟಿದೆ ಎಂದು ನನಗೆ ಗೊತ್ತಿರುತ್ತದೆ. ಸರ್ವೇ ನಂಬರ 320 ರಲ್ಲಿ 1 ಎಕರೆ 30 ಗುಂಟೆ ಮತ್ತು ಸರ್ವೇ ನಂಬರ 320 ರಲ್ಲಿ 4 ಎಕರೆ 30 ಗುಂಟೆ ಜಮೀನು ಮತ್ತು ಜಾಗಕ್ಕೆ ದಾವೆ ಸಲ್ಲಿಸಲಾಗಿದೆ, ಆದರೆ ಜಾಗದ ನಂಬರ ನನಗೆ ಗೊತ್ತಿಲ್ಲ.

5 ನೇ ಪ್ರತಿವಾದಿ ಹೇಳಿಕೆ ಮೇರೆಗೆ ನಾನು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

**ಓ ಹೇ ಕೇ ಸರಿ ಇದೆ**

**ಹಿರಿಯ ಸಿವಿಲ್ ನ್ಯಾಯಾಧೀಶರು**
**ಆಳಂದ**